ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (279) 297
ಸದಸ್ಯರ ಹೆಸರು : ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)
ಉತ್ತರಿಸುವ ಸಚಿವರು : (ಕೆ.ಎಸ್.ಈಶ್ವರಪ್ಪ) ಇಂಧನ ಸಚಿವರು.

****

ಅ) 10 ಅಶ್ವ ಶಕ್ತಿಯವರೆಗಿನ ಕೃಷಿ ಪಂಪುಸೆಟ್ಟುಗಳಿಗೆ ಉಚಿತ ವಿದ್ಯುತ್ ಪೂರೈಸಲಾಗುವುದೇ ಹಾಗೂ ಎಂದಿನಿಂದ ಪೂರೈಸಲಾಗುವುದು;

ಹೌದು, 10 ಅಶ್ವಶಕ್ತಿಯವರೆಗಿನ ಕೃಷಿ ಪಂಪು ಸೆಟ್‌ಗಳಿಗೆ ಉಚಿತ ವಿದ್ಯುತ್ ಪೂರೈಸಲಾಗುವುದು. ಸದರಿ ಯೋಜನೆಯನ್ನು ದಿನಾಂಕ 01-08-2008 ರಿಂದ ಜಾರಿಗೊಳಿಸಲಾಗುವುದು.

ಆ) ಹಾಗಿದ್ದಲ್ಲಿ, ಫಲಾನುಭವಿಗಳನ್ನು ಗುರುತಿಸಲಾಗಿದೆಯೇ ಹಾಗೂ ಇದಕ್ಕೆ ಅನುಸರಿಸಲಾಗುವ ಮಾನದಂಡಗಳಾವುವು?

10 ಅಶ್ವಶಕ್ತಿಯವರೆಗಿನ 15 ಲಕ್ಷ ನೀರಾವರಿ ಪಂಪುಸೆಟ್ಟುಗಳು ಉಚಿತ ವಿದ್ಯುತ್ ಸೌಲಭ್ಯವನ್ನು ಪಡೆಯಲಿವೆ. 10 ಅಶ್ವಶಕ್ತಿವರೆಗಿನ ನೀರಾವರಿ ಪಂಪುಸೆಟ್ಟುಗಳ ಜಿಲ್ಲಾವಾರು ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. ಉಚಿತ ವಿದ್ಯುತ್ ಸೌಲಭ್ಯವನ್ನು ಪಡೆದುಕೊಳ್ಳಲು 10 ಹೆಚ್.ಪಿ. ಸಾಮರ್ಥ್ಯದವರೆಗಿನ ನೀರಾವರಿ ಪಂಪುಸೆಟ್ಟುಗಳಿಗೆ ಮೀಟರ್ ಅಳವಡಿಕೆ ಕಡ್ಡಾಯವಾಗಿರುತ್ತದೆ. ಸದ್ಯದಲ್ಲಿಯೇ ಈ ಸಂಬಂಧ ಸರ್ಕಾರಿ ಆದೇಶ ಹೊರಡಿಸಲಾಗುತ್ತಿದ್ದು ಅದರಲ್ಲಿ ನಿಬಂಧನೆಗಳನ್ನು ತಿಳಿಸಲಾಗುವುದು.

ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 279ಕ್ಕೆ ಅನುಬಂಧ

31.03.2008 ರಲ್ಲಿ ಇದ್ದಂತೆ ರಾಜ್ಯದಲ್ಲಿರುವ ನೀರಾವರಿ ಪಂಪು ಸೆಟ್ಟುಗಳ ಜಿಲ್ಲಾವಾರು ವಿವರಗಳು

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	31-03-08 ರಲ್ಲಿದ್ದಂತೆ ನೀರಾವರಿ ಪಂಪುಸೆಟ್ಟುಗಳ ಒಟ್ಟು ಸಂಖ್ಯೆ
1	ಬೆಂಗಳೂರು ನಗರ	29910
2	ಬೆಂಗಳೂರು ಗ್ರಾಮೀಣ	110488
3	ಚಿತ್ರದುರ್ಗ	81214
4	ದಾವಣಗೆರೆ	72213
5	ಕೋಲಾರ	149071
6	ತುಮಕೂರು	183463

ಒಟ್ಟು		**626359**
ಮಂಗಳೂರು ವಿದ್ಯುತ್ ಸರಬರಾಜು ಕಂಪನಿ		
1	ಉಡುಪಿ	50993
2	ದಕ್ಷಿಣ ಕನ್ನಡ	58925
3	ಶಿವಮೊಗ್ಗ	40809
4	ಚಿಕ್ಕಮಗಳೂರು	38931
ಒಟ್ಟು		**189658**
ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ		
1	ಮಂಡ್ಯ	52279
2	ಮೈಸೂರು	45247
3	ಚಾಮರಾಜನಗರ	41302
4	ಹಾಸನ	49788
5	ಕೊಡಗು	5778
ಒಟ್ಟು		**194394**
ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ		
1	ಧಾರವಾಡ	15299
2	ಗದಗ	21760
3	ಹಾವೇರಿ	46279
4	ಬಿಜಾಪುರ	83548
5	ಬಾಗಲಕೋಟೆ	71778
6	ಬೆಳಗಾಂ	180442
7	ಉತ್ತರ ಕನ್ನಡ	40032
ಒಟ್ಟು		**459138**
ಗುಲ್ಬರ್ಗ ವಿದ್ಯುತ್ ಸರಬರಾಜು ಕಂಪನಿ		
1	ಗುಲ್ಬರ್ಗಾ	52916
2	ಬೀದರ್	48624
3	ರಾಯಚೂರು	34854
4	ಕೊಪ್ಪಳ	45937
5	ಬಳ್ಳಾರಿ	49383
ಒಟ್ಟು		**231714**

ಒಟ್ಟು ಸಂಖ್ಯೆ	1701263
ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರಿ ಸಂಘ	19742
ರಾಜ್ಯದ ಒಟ್ಟು ಸಂಖ್ಯೆ	1721005

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ – (280) 0298
(ಎಸ್.ಎನ್. ಕೃಷ್ಣಯ್ಯ ಶೆಟ್ಟಿ)
ಸದಸ್ಯರ ಹೆಸರು – ಶ್ರೀ ಹ್ಯಾರಿಸ್ ಎನ್.ಎ.(ಶಾಂತಿನಗರ)
ಉತ್ತರಿಸುವ ಸಚಿವರ ಹೆಸರು – ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು.

ಅ) ನಿವೇಶನ ಹಾಗೂ ವಸತಿರಹಿತರಿಗೆ ಮನೆ ಒದಗಿಸುವ ಯೋಜನೆ ಜಾರಿಗೊಳಿಸಲಾಗಿದೆಯೇ;

ಹೌದು.

ಆ) ಈ ಯೋಜನೆಗಳ ಫಲಾನುಭವಿಗಳ ಪಟ್ಟಿಯನ್ನು ವ್ಯವಸ್ಥಿತವಾಗಿ ತಯಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಗ್ರಾಮೀಣ ಆಶ್ರಯ ಮತ್ತು ಗ್ರಾಮೀಣ ಅಂಬೇಡ್ಕರ್:

ಸರ್ಕಾರದ ಸುತ್ತೋಲೆ ಸಂಖ್ಯೆ ವಇ 74 ಹೆಚ್ಎವೈ 2004, ದಿನಾಂಕ 20.11.2004ರ ಆದೇಶದ ಪ್ರಕಾರ ಫಲಾನುಭವಿಗಳನ್ನು ವಸತಿ ರಹಿತ ಮತ್ತು ನಿವೇಶನ ರಹಿತ ಪಟ್ಟಿಯಿಂದ ಗ್ರಾಮ ಸಭೆಯ ಮೂಲಕ ಆಯ್ಕೆ ಮಾಡಲಾಗುತ್ತಿದೆ.

ನಗರ ಆಶ್ರಯ:

ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದ ಸುತ್ತೋಲೆ ಸಂಖ್ಯೆ MDRGRHCL 04 UAS 03 2005, Date:19.05.2006 ರ ಪ್ರಕಾರ ಫಲಾನುಭವಿಗಳ ಆಯ್ಕೆಯನ್ನು ಆಶ್ರಯ ಸಮಿತಿಯು ವಸತಿ ರಹಿತ ಮತ್ತು ನಿವೇಶನ ರಹಿತ ಪಟ್ಟಿಯಿಂದ ಆಯ್ಕೆ ಮಾಡಲಾಗುತ್ತಿದೆ.

ಇಂದಿರಾ ಆವಾಸ್ ಯೋಜನೆ:

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಫಲಾನುಭವಿಗಳನ್ನು ಸರ್ವಕುಟುಂಬ ಸಮೀಕ್ಷೆಯಲ್ಲಿ 20 ಅಂಕಕ್ಕಿಂತ ಕಡಿಮೆ ಇರುವ ವಸತಿ ರಹಿತ ಫಲಾನುಭವಿಗಳನ್ನು ಆದ್ಯತೆ ಮೇರೆಗೆ ಆಯ್ಕೆ ಮಾಡಲಾಗುತ್ತಿದೆ.

ಇ) ಆರ್ಥಿಕ ವರ್ಷದಲ್ಲಿ ಸರ್ಕಾರ ರೂಪಿಸಿದ ಯೋಜನೆಯಂತೆ ಹಂಚಲುದ್ದೇಶಿಸಿದ ಮನೆ ಮತ್ತು ನಿವೇಶನಗಳೆಷ್ಟು;

ಮನೆಗಳು:

ಗ್ರಾಮೀಣ ಆಶ್ರಯ: